**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತನೆಯ ಅಧಿವೇಶನ**

# ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2023

**(2023ರ ವಿಧಾನಸಭೆಯ ವಿಧೇಯಕ ಸಂಖ್ಯೆ–04)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ನ್ನು (1966ರ ಕರ್ನಾಟಕ ಅಧಿನಿಯಮ 27) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 8ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ (1966ರ ಕರ್ನಾಟಕ ಅಧಿನಿಯಮ 27) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 8ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದ (ಬಿ) ಖಂಡದಲ್ಲಿನ "ಮಾರುಕಟ್ಟೆ ಸಮಿತಿಯು" ಎಂಬ ಪದಗಳ ತರುವಾಯ "ಅಥವಾ ಕೃಷಿ ಮಾರುಕಟ್ಟೆ ನಿರ್ದೇಶಕರು ಅಥವಾ ಆತನಿಂದ ಪ್ರಾಧೀಕರಿಸಿದ ಅಧಿಕಾರಿಯು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (2)ನೇ ಉಪ್ರಕರಣದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಮಾರುಕಟ್ಟೆ ಪ್ರಾಂಗಣ, ಮಾರುಕಟ್ಟೆ ಉಪ ಪ್ರಾಂಗಣ, ಉಪ ಮಾರುಕಟ್ಟೆ ಪ್ರಾಂಗಣ, ಖಾಸಗಿ ಮಾರುಕಟ್ಟೆ ಪ್ರಾಂಗಣ ಅಥವಾ ಸಂದರ್ಭಾನುಸಾರವಾಗಿ ರೈತ-ಗ್ರಾಹಕ ಮಾರುಕಟ್ಟೆ ಪ್ರಾಂಗಣವನ್ನು ಹೊರತುಪಡಿಸಿ ಯಾವುದೇ ಸ್ಥಳವನ್ನು ಅಧಿಸೂಚಿತ ಕೃಷಿ ಉತ್ಪನ್ನದ ಖರೀದಿ ಅಥವಾ ಮಾರಾಟಕ್ಕಾಗಿ ಉಪಯೋಗಿಸತಕ್ಕದ್ದಲ್ಲ".

(iii) ಹಾಗೆ ಪ್ರತಿಯೋಜಿಸಿದ (2)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(3) (2)ನೇ ಉಪಪ್ರಕರಣದಲ್ಲಿರುವುದಾವುದೂ,-

(ಎ) (i) ತಾಲ್ಲೂಕು ಕೃಷಿ ಉತ್ಪನ್ನ ಸಹಕಾರ ಮಾರುಕಟ್ಟೆ ಸಂಘದ ಮೂಲಕ ಮಾಡಿರುವ;

(ii) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮೂಲಕ ಮಾಡಿರುವ; ಮತ್ತು

(iii) ರಾಜ್ಯ ಸರ್ಕಾರವು ಅನುಮತಿ ನೀಡಿದ ಯಾವುದೇ ಇತರ ಸಹಕಾರ ಸಂಘದ ಮೂಲಕ ಮಾಡಿರುವ,

-ಅಧಿಸೂಚಿತ ಕೃಷಿ ಉತ್ಪನ್ನದ ಖರೀದಿ ಅಥವಾ ಮಾರಾಟಕ್ಕೆ,

(ಬಿ) ಚಿಲ್ಲರೆ ವ್ಯಾಪಾರಿಯ ಮೂಲಕ ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟಕ್ಕೆ,

(ಸಿ) ಕರಾರು ವ್ಯವಸಾಯ ಒಪ್ಪಂದದಡಿಯಲ್ಲಿ ಕರಾರು ವ್ಯವಸಾಯ ಪ್ರಾಯೋಜಕನಿಗೆ ಕರಾರು ವ್ಯವಸಾಯ ಉತ್ಪಾದಕನ ಮೂಲಕ ಮಾಡಿದ ಮಾರಾಟಕ್ಕೆ,

(ಡಿ) ಅಧಿನಿಯಮದ 72-ಎ ಪ್ರಕರಣದಡಿಯಲ್ಲಿ ಕೃಷಿಕನಿಂದ ಲೈಸನ್ಸುದಾರನ ಮೂಲಕ ಅಧಿಸೂಚಿತ ಕೃಷಿ ಉತ್ಪನ್ನದ ನೇರ ಖರೀದಿಗೆ,

- ಅನ್ವಯವಾಗತಕ್ಕದ್ದಲ್ಲ".

**3. 117ನೇ ಪ್ರಕರಣದ ಪ್ರತಿಯೋಜನೆ.-** ಮೂಲ ಅಧಿನಿಯಮದ 117ನೇ ಪ್ರಕರಣಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**117. 8ನೇ ಪ್ರಕರಣದ ಉಲ್ಲಂಘನೆಗಾಗಿ ದಂಡ.-** 8ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ (ಬಿ) ಖಂಡದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಮಾರುಕಟ್ಟೆ ಪ್ರದೇಶದಲ್ಲಿನ ಯಾವುದೇ ಸ್ಥಳವನ್ನು ಉಪಯೋಗಿಸುವ ಅಥವಾ ಸಿಂಧುವಾದ ಲೈಸನ್ಸು ಇಲ್ಲದೆ ವ್ಯಾಪಾರಿಯಾಗಿ, ದಳ್ಳಾಳಿಯಾಗಿ, ಬ್ರೋಕರ್ ಆಗಿ, ಸಂಸ್ಕರಣಕಾರನಾಗಿ, ದಾಸ್ತಾನುಗಾರನಾಗಿ ಅಥವಾ ಯಾವುದೇ ಸಾಮರ್ಥ್ಯದಲ್ಲಿ, 8ನೇ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಅಧಿಸೂಚಿತ ಕೃಷಿ ಉತ್ಪನ್ನದ ಖರೀದಿ ಮತ್ತು ಮಾರಾಟಕ್ಕೆ ಯಾವುದೇ ಸ್ಥಳವನ್ನು ಉಪಯೋಗಿಸುವ ಯಾರೇ ವ್ಯಕ್ತಿಯು, ಅಪರಾಧ ನಿರ್ಣಿತನಾದ ಮೇಲೆ ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೇ ಬಾರಿಯ ಉಲ್ಲಂಘನೆಯ ಸಂದರ್ಭದಲ್ಲಿ ಇಪ್ಪತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಹಾಗೂ ಮೂರನೇ ಬಾರಿಯ ಉಲ್ಲಂಘನೆಯ ಸಂದರ್ಭದಲ್ಲಿ ಮೂವತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು".

# ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
## (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರಲ್ಲಿನ ಪ್ರಕರಣ 8(2), ಪ್ರಕರಣ 8(3) ಮತ್ತು ಪ್ರಕರಣ 117ಕ್ಕೆ ತಿದ್ದುಪಡಿಯನ್ನು ಅಧ್ಯಾದೇಶದ ಮೂಲಕ ಮಾಡಿ 16.05.2020ರಂದು ಪ್ರಕಟಿಸಲಾಗಿತ್ತು. ಆ ತರುವಾಯ ಸದರಿ ಅಧ್ಯಾದೇಶವನ್ನು ಅಧಿನಿಯಮ ಸಂಖ್ಯೆ.59/2020ರ ಮೂಲಕ ಪರಿವರ್ತಿಸಿ, ಅದನ್ನು 31.12.2020ರಂದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

ಅದರ ಮುಖ್ಯಾಂಶಗಳೆಂದರೆ:-

1. ಸದರಿ ತಿದ್ದುಪಡಿಯ ಪರಿಣಾಮವಾಗಿ, ಮಾರುಕಟ್ಟೆ ಪ್ರಾಂಗಣಗಳಲ್ಲಿ ಅಧಿಸೂಚಿತ ಕೃಷಿ ಉತ್ಪನ್ನಗಳ ಖರೀದಿ ಮತ್ತು ಮಾರಾಟ ಕೈಗೊಳ್ಳುವುದಕ್ಕಾಗಿನ ನಿರ್ಬಂಧವನ್ನು ತೆಗೆದುಹಾಕಲಾಗಿತ್ತು ಮತ್ತು ಎಪಿಎಂಸಿಗಳ ಪಾತ್ರವನ್ನು ಮಾರುಕಟ್ಟೆ ಪ್ರಾಂಗಣಗಳಿಗೆ ಮಾತ್ರ ನಿರ್ಬಂಧಿಸಲಾಗಿತ್ತು. ಮಾರುಕಟ್ಟೆ ಪ್ರಾಂಗಣಗಳ ಹೊರಗಿನ ವ್ಯಾಪಾರವನ್ನು ನಿಷೇಧಿಸುವ ಅಧಿನಿಯಮದ ಪ್ರಕರಣ 8(2)ರಡಿಯಲ್ಲಿನ ನಿರ್ಬಂಧವನ್ನು, ಹಾಗೂ ಅದರ ಉಲ್ಲಂಘನೆಗಾಗಿ 117ನೇ ಪ್ರಕರಣದ ಅಡಿಯಲ್ಲಿ ನಿಯಮಿಸಲಾದ ದಂಡ ವಿಧಿಸುವಿಕೆಯನ್ನು ಮತ್ತು ಅಪರಾಧ ನಿರ್ಣಯವನ್ನು ಬಿಟ್ಟುಬಿಡಲಾಗಿತ್ತು. ಅಧಿನಿಯಮದ ಪ್ರಕರಣ 8(2)ರಡಿಯಲ್ಲಿ ವಿಧಿಸಿದ ನಿರ್ಬಂಧಗಳಿಗಾಗಿ ಪ್ರಕರಣ 8(3)ರಡಿಯಲ್ಲಿ ನೀಡಲಾದ ಕೆಲವು ವಿನಾಯಿತಿಗಳನ್ನು ಸಹ ಬಿಟ್ಟುಬಿಡಲಾಗಿತ್ತು.

2. ಭಾರತ ಸರ್ಕಾರವು 2020ರ ಅಧ್ಯಾದೇಶ ಸಂಖ್ಯೆ.10ರ ಮೂಲಕ 03 ಕೃಷಿ ಕಾನೂನುಗಳನ್ನು ರಚಿಸಿತ್ತು ಮತ್ತು ಅವುಗಳನ್ನು 05.06.2020ರಿಂದ ಜಾರಿಗೊಳಿಸಲಾಗಿತ್ತು. ಆ ತರುವಾಯ ಸದರಿ ಅಧ್ಯಾದೇಶವನ್ನು ಅಧಿನಿಯಮ ಸಂ. 21/2020ರ ಮೂಲಕ ಪರಿವರ್ತಿಸಲಾಗಿತ್ತು ಹಾಗೂ 27.09.2020ರಿಂದ ಜಾರಿಗೊಳಿಸಿತ್ತು. ಸದರಿ ಕೃಷಿ ಕಾನೂನುಗಳನ್ನು ರೈತರು ವಿರೋಧಿಸುತ್ತಿರುವ ಕಾರಣದಿಂದಾಗಿ, ಭಾರತ ಸರ್ಕಾರವು ಸದರಿ ಅಧಿನಿಯಮವನ್ನು ಹಿಂಪಡೆಯಲು ನಿರ್ಧರಿಸಿತು ಮತ್ತು 01.12.2021ರಿಂದ ಜಾರಿಗೆ ಬರುವಂತೆ ಅದನ್ನು ಅಧಿನಿಯಮ ಸಂ.40/2021ರ ಮೂಲಕ ನಿರಸನಗೊಳಿಸಲಾಯಿತು. ಅದನ್ನು ಭಾರತ ಸರ್ಕಾರದ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಲಾಯಿತು.

3. 2020ರ ಅಧಿನಿಯಮ ಸಂ. 59ರ ಮೂಲಕ ರಾಜ್ಯ ಸರ್ಕಾರವು ಮಾಡಿರುವ ತಿದ್ದುಪಡಿಗಳ ಪರಿಣಾಮವಾಗಿ ಈ ಕೆಳಕಂಡ ಪ್ರತಿಕೂಲ ಪರಿಣಾಮಗಳನ್ನು ಗಮನಿಸಲಾಗಿದೆ, ಎಂದರೆ:-

(ಎ) ಮಾರುಕಟ್ಟೆ ಪ್ರಾಂಗಣಗಳನ್ನು ಹೊರತುಪಡಿಸಿದ ಮಾರುಕಟ್ಟೆ ಪ್ರದೇಶದಲ್ಲಿ ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣಕ್ಕೆ ಯಾವುದೇ ವ್ಯವಸ್ಥೆ ಇಲ್ಲದೆ ರೈತರು ಶೋಷಣೆಗೆ ಒಳಗಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ.

(ಬಿ) ಮಾರುಕಟ್ಟೆ ಪ್ರಾಂಗಣಗಳ ಹೊರಗಡೆ ನಡೆಯುವ ಅಧಿಸೂಚಿತ ಕೃಷಿ ಉತ್ಪನ್ನಗಳ ವ್ಯಾಪಾರ ವಹಿವಾಟಿಗೆ ಸಂಬಂಧಿಸಿದಂತೆ ಲಭ್ಯವಿರುವ ದಾಖಲೆಗಳ ಸ್ಥೂಲ ಪರಿಶೀಲನೆ ಇಲ್ಲದೆ ಸರ್ಕಾರಕ್ಕೆ ವಿವಿಧ ಶೀರ್ಷಿಕೆಗಳಡಿಯಲ್ಲಿ ಬರಬೇಕಾದ ತೆರಿಗೆ/ಉಪಕರ ಇವುಗಳ ಸೋರಿಕೆಗೆ ಅವಕಾಶ ಉಂಟಾಗಿರುತ್ತದೆ.

(ಸಿ) ಮಾರುಕಟ್ಟೆ ಪ್ರಾಂಗಣದಲ್ಲಿ ಆನ್‌ಲೈನ್ (ಏಕೀಕೃತ ಮಾರಾಟ ವೇದಿಕೆ) ಮೂಲಕ ಅಧಿಸೂಚಿತ ಕೃಷಿ ಉತ್ಪನ್ನಗಳ ಸಗಟು ವ್ಯಾಪಾರ ವಹಿವಾಟು ನಡೆಯುತ್ತಿದ್ದು, ಏಕೀಕೃತ ಮಾರುಕಟ್ಟೆ ವೇದಿಕೆಯಡಿಯಲ್ಲಿ ರೈತರಿಗೆ ನ್ಯಾಯೋಚಿತ ಮತ್ತು ಸ್ಪರ್ಧಾತ್ಮಕ ಬೆಲೆಯ ಪ್ರಯೋಜನ ದೊರೆಯಲು ಅವಕಾಶವಿರುತ್ತದೆ. ಪ್ರಸ್ತುತ ಮಾರುಕಟ್ಟೆ ಪ್ರಾಂಗಣದ ಹೊರಗಡೆ ಆನ್‌ಲೈನ್ ವ್ಯವಸ್ಥೆ ಇಲ್ಲದೆ ಇರುವುದರಿಂದ ರೈತರು ಬೆಳೆದ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಮತ್ತು ನ್ಯಾಯೋಚಿತ ಬೆಲೆ ಸಿಗುವ ಸಾಧ್ಯತೆಗಳು ಕಡಿಮೆಯಾಗಿರುತ್ತದೆ.

(ಡಿ) ರೈತರು ಮಾರುಕಟ್ಟೆ ಪ್ರಾಂಗಣಗಳ ಹೊರಗಡೆ ಮಾರಾಟ ಮಾಡಿದ ಉತ್ಪನ್ನದ ನ್ಯಾಯೋಚಿತ ಮೌಲ್ಯವನ್ನು ಪಡೆಯುವುದಕ್ಕಾಗಿ ಖಾತರಿ ವ್ಯವಸ್ಥೆಯು ಇಲ್ಲದಂತಾಗಿದೆ.

(ಇ) ಈ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಿದ ವ್ಯವಸ್ಥೆಯನುಸಾರ ಮಾರುಕಟ್ಟೆ ಪ್ರಾಂಗಣಗಳಲ್ಲಿ ನಡೆಯುವ ವಹಿವಾಟಿಗೆ ಸಂಬಂಧಿಸಿದಂತೆ, ರೈತರಿಗೆ ಮಾರಾಟಗೊಂಡ ಉತ್ಪನ್ನದ ತೂಕ ಮತ್ತು ಹಣ ಪಾವತಿ, ಇತ್ಯಾದಿಗೆ ಸಂಬಂಧಿಸಿದಂತೆ ರೈತರು ಮತ್ತು ಮಾರುಕಟ್ಟೆ ಕಾರ್ಯನಿರ್ವಹಕರ ನಡುವೆ ಉದ್ಭವಿಸುವ ವಿವಾದಗಳನ್ನು ಇತ್ಯರ್ಥಪಡಿಸಲು ಅವಕಾಶವಿರುತ್ತದೆ. ಆದರೆ, ರೈತರಿಂದ ಮಾರುಕಟ್ಟೆ ಪ್ರಾಂಗಣಗಳ ಹೊರಗಡೆ ನಡೆಯುವ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸದರಿ ಇತ್ಯರ್ಥ ವ್ಯವಸ್ಥೆಯು ಲಭ್ಯವಿರುವುದಿಲ್ಲ.

(ಎಫ್) ಕೃಷಿ ಉತ್ಪನ್ನಗಳು ಮತ್ತು ಆವಕಗಳಿಗಾಗಿ ರಾಜ್ಯದಲ್ಲಿನ ವಿವಿಧ ಮಾರುಕಟ್ಟೆಗಳಲ್ಲಿ ಜಾರಿಯಲ್ಲಿರುವ ದರಗಳ ಬಗ್ಗೆ ರೈತರು ತಿಳಿದಿಲ್ಲದಿರುವುದರಿಂದ, ಅವರು ತಮ್ಮ ಉತ್ಪನ್ನಗಳಿಗೆ ನಿಗದಿಪಡಿಸುವ ಬೆಲೆಗಳ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಸಮರ್ಥರಾಗಿರುವುದಿಲ್ಲ. ಹಾಗಾಗಿ ಅವರು ಸ್ಪರ್ಧಾತ್ಮಕ ಬೆಲೆ ಪಡೆಯುವಲ್ಲಿ ವಿಫಲರಾಗುತ್ತಾರೆ.

(ಜಿ) ರಾಜ್ಯದಲ್ಲಿನ ಮಾರುಕಟ್ಟೆ ಪ್ರಾಂಗಣಗಳನ್ನು ಭಾರತ ಸರ್ಕಾರ, ರಾಜ್ಯ ಸರ್ಕಾರ ಮತ್ತು ಮಾರುಕಟ್ಟೆ ಸಮಿತಿಗಳ ನಿಧಿಗಳ ಅನುದಾನಗಳ ಮೂಲಕ ಅಭಿವೃದ್ಧಿಪಡಿಸಲಾಗಿರುತ್ತದೆ. ಅವುಗಳಿಗೆ ಇಲ್ಲಿಯವರೆಗೆ ಸೃಜಿಸಲಾದ ಮೂಲಭೂತ ಸೌಲಭ್ಯಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳದಿರುವುದರಿಂದ, ಅವುಗಳು ಕಾಲಕ್ರಮೇಣ ನಿರುಪಯುಕ್ತವಾಗುತ್ತವೆ.

(ಹೆಚ್) ಸರಿಸುಮಾರು ಒಂದು ಲಕ್ಷ ಮಂದಿ ಮಾರುಕಟ್ಟೆ ಸಮಿತಿಯಿಂದ ಲೈಸೆನ್ಸ್ ಪಡೆದು ಕಾರ್ಯನಿರ್ವಹಿಸುತ್ತಿದ್ದು, ಮಾರಾಟಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಅವರುಗಳೆಂದರೆ ಹಮಾಲರು, ತೂಕ ಮಾಡುವವರು, ಚಕ್ಕಡಿಯವರು, ವರ್ತಕರಲ್ಲಿ, ದಲ್ಲಾಳಿ ಏಜೆಂಟರಲ್ಲಿ, ದಾಸ್ತಾನುದಾರ ಅಂಗಡಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕರು, ಇವರುಗಳಿಗೆ ಮಾರುಕಟ್ಟೆ ಪ್ರಾಂಗಣದಲ್ಲಿ ಪೂರ್ಣ ಪ್ರಮಾಣದಲ್ಲಿ ವ್ಯಾಪಾರ ವಹಿವಾಟು ನಡೆಯದೆ ವರ್ಷಪೂರ್ತಿ ಉದ್ಯೋಗ ಹಾಗೂ ಜೀವನೋಪಾಯ ನಡೆಸಲು ಕಷ್ಟಸಾಧ್ಯವಾಗಿರುತ್ತದೆ.

(ಐ) ಕನಿಷ್ಟ ಬೆಂಬಲ ಬೆಲೆ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರವು ರಚಿಸಿರುವ ಆವರ್ತಕ ನಿಧಿಗಳಿಗೆ ಎಪಿಎಂಸಿ-ಗಳು ತಮ್ಮ ಕೊಡುಗೆಯನ್ನು ನೀಡುತ್ತಿವೆ. ಅಧಿನಿಯಮದ ತಿದ್ದುಪಡಿಗೆ ಮೊದಲು ಮಾರುಕಟ್ಟೆ ಪ್ರಾಂಗಣದಲ್ಲಿ ಕೇಂದ್ರ ಸರ್ಕಾರವು ಘೋಷಿಸಿರುವ ಕನಿಷ್ಠ ಬೆಂಬಲ ಬೆಲೆಗಿಂತ ಉತ್ಪನ್ನಗಳ ಬೆಲೆ ಕಡಿಮೆಯಾದಂತಹ ಸಂದರ್ಭದಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆ ಅನುಷ್ಠಾನಕ್ಕಾಗಿ ಮಾರುಕಟ್ಟೆ ಸಮಿತಿಗಳು ಪಾವತಿಸುವ ಆವರ್ತ ನಿಧಿ ವಂತಿಗೆಯಲ್ಲಿ, ವಾರ್ಷಿಕವಾಗಿ ಅಂದಾಜು ರೂ.125 ಕೋಟಿಗಳಿದ್ದು, ತಿದ್ದುಪಡಿಯ ಕಾರಣದಿಂದಾಗಿ ಎಪಿಎಂಸಿಗಳ ಪಾತ್ರವು ಮಾರುಕಟ್ಟೆ ಪ್ರಾಂಗಣಗಳಿಗೆ ನಿರ್ಬಂಧಿಸಿರುವುದರಿಂದ ಆವರ್ತ ನಿಧಿಗೆ ಎಪಿಎಂಸಿ-ಗಳ ಕೊಡುಗೆಯು ಶೇ.50 ರಷ್ಟು ಕುಸಿತಗೊಂಡು ಪ್ರಸ್ತುತ ರೂ.60.00 ಕೋಟಿಗಳಾಗಿರುತ್ತದೆ.

(ಜೆ) ಮಾರುಕಟ್ಟೆ ಪ್ರಾಂಗಣಗಳಲ್ಲಿ ನಡೆಯುವ ವ್ಯಾಪಾರ ವಹಿವಾಟಿಗೆ ಸಂಬಂಧಿಸಿದ ವಿವರಗಳಲ್ಲಿ, ಚಾಲ್ತಿಯಲ್ಲಿರುವ ಕೃಷಿ ಉತ್ಪನ್ನಗಳ ಬೆಲೆ ಮಾಹಿತಿ ಹಾಗೂ ಸರಕು ಆವಕಗಳ ಪ್ರಮಾಣವು ಲಭ್ಯವಾಗುವುದರಿಂದ ಸರ್ಕಾರಕ್ಕೆ ನೀತಿ ಮತ್ತು ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಸಹಕಾರಿಯಾಗುತ್ತದೆ. ಆದರೆ, ಪ್ರಾಂಗಣದ ಹೊರಗಿನ ವಹಿವಾಟಿನಲ್ಲಿ ಸದರಿ ಮಾಹಿತಿಯು ಲಭ್ಯವಾಗದ ಕಾರಣ ವಿಶ್ವಾಸನೀಯ ದತ್ತಾಂಶಗಳ ಕೊರತೆಯಿಂದಾಗಿ ಸರ್ಕಾರಕ್ಕೆ ನೀತಿ ಮತ್ತು ಕಾರ್ಯಕ್ರಮಗಳನ್ನು ರೂಪಿಸಲು ಸರಿಯಾದ ನಿರ್ಧಾರ ಕೈಗೊಳ್ಳಲು ಸಾಧ್ಯವಾಗುವುದಿಲ್ಲ.

(ಕೆ) ಮಾರುಕಟ್ಟೆ ಪ್ರಾಂಗಣಗಗಳ ಹೊರಗೆ ವ್ಯಾಪಾರ ವಹಿವಾಟಿಗೆ ಅನುಮತಿಸಿ, ಈ ಹಿಂದೆ ತಿದ್ದುಪಡಿ ತರುವ ಮೂಲಕ ರೈತರ ಉತ್ಪನ್ನದ ಬೆಲೆ ಹಾಗೂ ಆದಾಯದಲ್ಲಿ ಹೆಚ್ಚಳವಾಗುವದೆಂಬ ನಿರೀಕ್ಷೆಗಳು ವಿಫಲವಾಗಿರುವುದು ಗಮನಕ್ಕೆ ಬಂದಿರುತ್ತದೆ.

(ಎಲ್) ರಾಜ್ಯದಲ್ಲಿ ಎಪಿಎಂಸಿ-ಗಳು ವಿಧಿಸುತ್ತಿದ್ದ ಮತ್ತು ಸಂಗ್ರಹಿಸುತ್ತಿದ್ದ ಮಾರುಕಟ್ಟೆ ಶುಲ್ಕವನ್ನು ಮಾರುಕಟ್ಟೆಗಳ ಪ್ರಾಂಗಣಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಹಾಗೂ ಎಪಿಎಂಸಿ-ಗಳ ನಿರ್ವಹಣೆಗಾಗಿ ಬಳಸಲಾಗುತ್ತಿತ್ತು. ಮಾರುಕಟ್ಟೆ ಪ್ರಾಂಗಣಗಳ ಹೊರಗಡೆ ನಡೆಯುವ ವಹಿವಾಟಿನ ಕಾರಣದಿಂದಾಗಿ ಎಪಿಎಂಸಿ-ಗಳು ಮಾರುಕಟ್ಟೆ ಶುಲ್ಕವನ್ನು ವಿಧಿಸಲು ಮತ್ತು ಸಂಗ್ರಹಿಸಲು ಅವಕಾಶವಿಲ್ಲದಿರುವ ಕಾರಣ ಅವುಗಳ ಆದಾಯದಲ್ಲಿ ಗಣನೀಯ ಪರಿಣಾಮವುಂಟಾಗಿರುತ್ತದೆ. ಇದರಿಂದ ಶೇ.50ರಷ್ಟು ಆದಾಯ ಕುಸಿತವಾಗಿದ್ದು, ಪ್ರಾಂಗಣಗಳ ನಿರ್ವಹಣೆ ಮತ್ತು ಇತರ ಹೊಣೆಗಾರಿಕೆಗಳಿಗೆ ತೊಂದರೆಯಾಗಿರುತ್ತದೆ.

4. ಪ್ರಸ್ತುತ, ರಾಜ್ಯ ಸರ್ಕಾರವು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಪ್ರಕರಣ 8(2), ಪ್ರಕರಣ 8(3) ಹಾಗೂ ಪ್ರಕರಣ 117ಕ್ಕೆ ಅಧಿನಿಯಮ ಸಂಖ್ಯೆ:59/2020ರ ಮೂಲಕ ಕೈಗೊಂಡ ತಿದ್ದುಪಡಿಯ ಉದ್ದೇಶಗಳು ಈಡೇರಿರುವುದಿಲ್ಲವಾದ್ದರಿಂದ, ಮಾರುಕಟ್ಟೆ ಪ್ರಾಂಗಣಗಳ ಹೊರಗಡೆ ಮಾರುಕಟ್ಟೆ ಪ್ರದೇಶದಲ್ಲಿ ನಡೆಯುವ ವಹಿವಾಟಿನ ಮೇಲೆ ಈ ಹಿಂದಿನಂತೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣವನ್ನು ಹೊಂದುವುದು ರೈತ ಬೆಳೆಗಾರರ ಹಿತದೃಷ್ಟಿಯಿಂದ ಮುಖ್ಯವಾಗಿರುವುದರಿಂದ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಪ್ರಕರಣ 8(2), ಪ್ರಕರಣ 8(3) ಹಾಗೂ ಪ್ರಕರಣ 117ಕ್ಕೆ ತಿದ್ದುಪಡಿ ಮಾಡಲು ಪ್ರಸ್ತಾಪಿಸಲಾಗಿದೆ.

5. ಅಲ್ಲದೆ, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಪ್ರಕರಣ 72(4)ಕ್ಕೆ, ಅಧಿನಿಯಮ ಸಂಖ್ಯೆ:05/2014ರ ಮೂಲಕ ತಿದ್ದುಪಡಿ ಮಾಡಿ ದಿನಾಂಕ:04/01/2014 ರಂದು ಜಾರಿಗೊಳಿಸಲಾಗಿದೆ. ಕೃಷಿ ಮಾರುಕಟ್ಟೆ ನಿರ್ದೇಶಕರು ಅಥವಾ ಅವರಿಂದ ಪ್ರಾಧೀಕರಿಸಲ್ಪಟ್ಟ ಅಧಿಕಾರಿಗಳು ವ್ಯಾಪಾರಿಗಳ ಲೈಸೆನ್ಸ್ ನೀಡಲು ಅಧಿಕಾರವನ್ನು ಹೊಂದಿರುತ್ತಾರೆ. ಸದರಿ ಅಧಿನಿಯಮದ 8ನೇ ಪ್ರಕರಣವು ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣವನ್ನು ಉಪಬಂಧಿಸುತ್ತದೆ. ಹಾಗೂ 8(1)(ಬಿ) ಪ್ರಕರಣವು ಮಂಜೂರಾದ ಲೈಸೆನ್ಸಿನ ನಿಬಂಧನೆಗಳು ಮತ್ತು ಷರತ್ತುಗಳ ಅಡಿಯಲ್ಲಿ ಅಧಿಸೂಚಿತ ಕೃಷಿ ಉತ್ಪನ್ನಗಳ ವ್ಯಾಪಾರ ವಹಿವಾಟನ್ನು ನಡೆಸತಕ್ಕದ್ದೆಂದು ನಿರ್ದಿಷ್ಟಪಡಿಸುತ್ತದೆ. ಈ ಹಿನ್ನೆಲೆಯಲ್ಲಿ ಅಧಿನಿಯಮದ ಪ್ರಕರಣ 72(4)ರ ಅಡಿಯಲ್ಲಿ ಮಾಡಲಾದ ತಿದ್ದುಪಡಿಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕೃಷಿ ಮಾರುಕಟ್ಟೆ ನಿರ್ದೇಶಕರು ಅಥವಾ ಅವರಿಂದ ಪ್ರಾಧೀಕರಿಸಲ್ಪಟ್ಟ ಅಧಿಕಾರಿಗೆ ಪ್ರಕರಣ 8(1)(ಬಿ) ಅಡಿಯಲ್ಲಿ ಅಧಿಕಾರಗಳನ್ನು ನೀಡುವುದು ಕಾನೂನಾತ್ಮಕವಾಗಿ ಅವಶ್ಯಕವಾಗಿರುತ್ತದೆ.

ಆದ್ದರಿಂದ, ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಶಿವಾನಂದ ಎಸ್ ಪಾಟೀಲ್**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ

## ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ (1966 ರ ಕರ್ನಾಟಕ ಅಧಿನಿಯಮ ಸಂಖ್ಯೆ 27) ಉದ್ಧೃತ ಭಾಗ

**xx xx xx**

**8. ಕೃಷಿ ಉತ್ಪನ್ನದ ಕ್ರಯವಿಕ್ರಯದ ನಿಯಂತ್ರಣ.- .**- (1) ಮಾರುಕಟ್ಟೆ ಸ್ಥಾಪನೆಯ ತರುವಾಯ,-

(ಎ) ಯಾವ ಸ್ಥಳೀಯ ಪ್ರಾಧಿಕಾರವೂ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಧಿಸೂಚಿಸಲಾದ ಯಾವುದೇ ಕೃಷಿ ಉತ್ಪನ್ನದ ಕ್ರಯ ವಿಕ್ರಯಕ್ಕಾಗಿ ಮಾರುಕಟ್ಟೆ ಪ್ರದೇಶದಲ್ಲಿ ಯಾವುದೇ ಸ್ಥಳವನ್ನು ಸ್ಥಾಪಿಸತಕ್ಕುದಲ್ಲ, ಸ್ಥಾಪಿಸಲು ಅಧಿಕಾರ ನೀಡತಕ್ಕುದಲ್ಲ ಅಥವಾ ಸ್ಥಾಪಿಸಿರುವಲ್ಲಿ ಮುಂದುವರಿಸತಕ್ಕುದಲ್ಲ ಅಥವಾ ಸ್ಥಾಪಿಸುವುದಕ್ಕೆ, ಸ್ಥಾಪಿಸಲು ಅಧಿಕಾರ ನೀಡುವುದಕ್ಕೆ ಅಥವಾ ಸ್ಥಾಪಿಸಿರುವಲ್ಲಿ ಮುಂದುವರಿಸುವುದಕ್ಕೆ ಅನುಮತಿಸತಕ್ಕುದಲ್ಲ:

ಪರಂತು, ಸ್ಥಳೀಯ ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳು ಮತ್ತು ನಿಯಮಗಳು ಮತ್ತು ಉಪವಿಧಿಗಳು ಮತ್ತು ಮಾರುಕಟ್ಟೆ ಸಮಿತಿಯ ಸ್ಥಾಯೀ ಆದೇಶಗಳಿಗೆ ಅನುಸಾರವಾಗಿ ಹೊರತು, ಅಂಥ ಸ್ಥಳದಲ್ಲಿ ಮಾರುಕಟ್ಟೆ ಕಾರ್ಯನಿರ್ವಾಹಕನು ವ್ಯವಹಾರ ನಡೆಸತಕ್ಕುದಲ್ಲ ಎಂಬ ಷರತ್ತುಗಳಿಗೊಳಪಟ್ಟು ದನಕರು, ಕುರಿ, ಮತ್ತು ಆಡುಗಳ ಹೊರತಾಗಿ]$_2$ಯಾವುದೇ ಅಧಿಸೂಚಿತ ಕೃಷಿ ಉತ್ಪನ್ನದ ಚಿಲ್ಲರೆ ಮಾರಾಟಕ್ಕಾಗಿ ಯಾವುದೇ ಸ್ಥಳವನ್ನು ಸ್ಥಾಪಿಸಬಹುದು ಅಥವಾ ಮುಂದುವರಿಸಬಹುದು;

(ಬಿ) ಈ ಸಂಬಂಧದಲ್ಲಿ ಮಾರುಕಟ್ಟೆ ಸಮಿತಿಯು ಮಂಜೂರು ಮಾಡಿದ ಲೈಸೆನ್ಸಿನ ಹೊರತು ಅಥವಾ ಅನ್ಯಥಾ ಅಂಥ ಲೈಸನ್ಸಿನ ನಿಬಂಧನೆಗಳ ಮತ್ತು ಷರತ್ತುಗಳ ಅನುಸಾರವಾಗಿ ಹೊರತು ಯಾವನೇ ವ್ಯಕ್ತಿಯು,-

(i) ಅಧಿಸೂಚಿತ ಕೃಷಿ ಉತ್ಪನ್ನದ ಕ್ರಯವಿಕ್ರಯಕ್ಕಾಗಿ ಮಾರುಕಟ್ಟೆ ಪ್ರದೇಶದಲ್ಲಿನ ಯಾವುದೇ ಸ್ಥಳವನ್ನು ಉಪಯೋಗಿಸತಕ್ಕುದಲ್ಲ,ಅಥವಾ

(ii) ಅಧಿಸೂಚಿತ ಕೃಷಿ ಉತ್ಪನ್ನದ ಕ್ರಯವಿಕ್ರಯಕ್ಕೆ ಸಂಬಂಧಿಸಿದಂತೆ ಒಬ್ಬ ವ್ಯಾಪಾರಿ, ಕಮೀಷನ್ ಏಜೆಂಟ್, ದಳ್ಳಾಳಿ, ಸಂಸ್ಕರಣಕಾರ,ತೂಕ ಮಾಡುವವ, ಉಗ್ರಾಣಪಾಲಕ ಎಂಬವನಾಗಿ ಅಥವಾ ಯಾವುದೇ ಅಧಿಕಾರ ಸಾಮರ್ಥ್ಯದಲ್ಲಿ ಮಾರುಕಟ್ಟೆ ಪ್ರದೇಶದಲ್ಲಿಅಥವಾ ಅದರಲ್ಲಿರುವ ಯಾವುದೇ ಮಾರುಕಟ್ಟೆಯಲ್ಲಿ ವ್ಯವಹರಿಸತಕ್ಕುದಲ್ಲ:

ಪರಂತು (ಬಿ) ಖಂಡದಲ್ಲಿರುವುದಾವುದೂ,-

(i) ಅಂಥ ಉತ್ಪನ್ನದ ಉತ್ಪಾದಕನು ತಾನೇ ಮಾರಾಟಗಾರನಾಗಿದ್ದಲ್ಲಿ ಅಂಥ ಕೃಷಿ ಉತ್ಪನ್ನದ ಮಾರಾಟಕ್ಕೆ, ಅಥವಾ

(ii) ಅಂಥ ಉತ್ಪನ್ನದ ಖರೀದಿದಾರನು ತನ್ನ ಗೃಹಬಳಕೆಗಾಗಿ ಅಂಥ ಉತ್ಪನ್ನವನ್ನು ಖರೀದಿಸುವ ವ್ಯಕ್ತಿಯಾಗಿದ್ದಲ್ಲಿ, ಅಂಥ ಕೃಷಿ ಉತ್ಪನ್ನದ ಮಾರಾಟಕ್ಕೆ - ಅನ್ವಯವಾಗತಕ್ಕುದಲ್ಲ.

(2) ಮಾರುಕಟ್ಟೆ ಸಮಿತಿಯು, ಮಾರುಕಟ್ಟೆ ಪ್ರಾಂಗಣಗಳಲ್ಲಿ, ಮಾರುಕಟ್ಟೆ ಉಪ ಪ್ರಾಂಗಣಗಳಲ್ಲಿ ಮತ್ತು ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟವನ್ನು ನಿಯಂತ್ರಿಸತಕ್ಕದ್ದು.

xx xx xx

**117. 8ನೇ ಪ್ರಕರಣದ ಉಲ್ಲಂಘನೆಗಾಗಿ ದಂಡ.-** 8ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಉಪಬಂಧಗಳನ್ನು ಉಲ್ಲಂಘಿಸಿ, ಯಾವುದೇ ಕೃಷಿ ಉತ್ಪನ್ನವನ್ನು ಮಾರಾಟ ಮಾಡುವುದಕ್ಕಾಗಿ ಮಾರುಕಟ್ಟೆ ಪ್ರದೇಶದಲ್ಲಿನ ಯಾವುದೇ ಸ್ಥಳವನ್ನು ಉಪಯೋಗಿಸುವ ಅಥವಾ ಸಿಂಧುವಾದ ಲೈಸನ್ಸ್ ಇಲ್ಲದೆ ವ್ಯಾಪಾರಿಯಾಗಿ, ದಳ್ಳಾಳಿಯಾಗಿ, ಬ್ರೋಕರ್‌ನಾಗಿ, ಸಂಸ್ಕರಣಗಾರನಾಗಿ, ದಾಸ್ತಾನುಗಾರನಾಗಿ ಅಥವಾ

ಯಾವುದೇ ಇತರ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುವ ಯಾವನೇ ವ್ಯಕ್ತಿಯು ಅಥವಾ 8ನೇ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಸ್ಥಳವನ್ನು ಅಧಿಸೂಚಿತ ಕೃಷಿ ಉತ್ಪನ್ನದ ಖರೀದಿಗಾಗಿ, ಅಥವಾ ಮಾರಾಟಕ್ಕಾಗಿ ಬಳಸುವ ಯಾವನೇ ವ್ಯಕ್ತಿಯು ಅಪರಾಧ ನಿರ್ಣೀತನಾದ ಮೇಲೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಆದರೆ ಐದುನೂರು ರೂಪಾಯಿಗಳಿಗೆ ಕಡಿಮೆಯಲ್ಲದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ ಮೊದಲನೆಯ ಅಪರಾಧ ನಿರ್ಣಯದ ಅನಂತರ ಉಲ್ಲಂಘನೆಯು ಮುಂದುವರಿದ ಅವಧಿಯ ಪ್ರತಿದಿನಕ್ಕೆ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**xx xx xx**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾಸೊ , ಪ್ರತಿಗಳು 300, 17ನೇ ಜುಲೈ, 2023

KARNATAKA LEGISLATIVE COUNCIL
ONE HUNDRED AND FIFTIETH SESSION

# THE KARNATAKA AGRICULTURAL PRODUCE MARKETING (REGULATION AND DEVELOPMENT) (AMENDMENT) BILL, 2023

**(LA Bill No. 04 of 2023)**

**(As passed by the Karnataka Legislative Assembly)**

A Bill further to amend the Karnataka Agricultural Produce Marketing (Regulation and Development) Act, 1966.

Whereas it is expedient further to amend the Karnataka Agricultural Produce Marketing (Regulation and Development) Act, 1966 (Karnataka Act 27 of 1966) for the purposes hereinafter appearing;

Be it enacted by the Karnataka State Legislature in the seventy fourth year of the Republic of India as follows:-

**1. Short title and commencement.**- (1) This Act may be called the Karnataka Agricultural Produce Marketing (Regulation and Development) (Amendment) Act, 2023.

(2) It shall come into force at once.

**2. Amendment of section 8.-** In the Karnataka Agricultural Produce Marketing (Regulation and Development) Act, 1966 (Karnataka Act 27 of 1966) (herein after referred to as the Principal Act) in section 8 ,-

(i) in sub-section (1), in clause (b) after the words "the market committee", the words "or the Director of Agricultural Marketing or the officer authorized by him", shall be inserted;

(ii) for sub-section (2), the following shall be substituted, namely:-

"(2) No place except the market yard, market sub-yard, sub-market yard, private market yard or farmer-consumer market yard, as the case may be, shall be used for purchase or sale of notified agricultural produce."

(iii)after sub-section (2), as so substituted the following shall be inserted, namely:-

" (3) Nothing in sub-section(2) shall apply to,-

(a) the purchase or sale of notified agricultural produce by,-

(i) a Taluk Agricultural produce Co-operative Marketing Society;

(ii) a Primary Agricultural Co-operative Credit Society; and

(iii) any other Co-operative Society permitted by the State Government.

(b) the sale of notified agricultural produce by a retail trader.

(c) a sale by a contract farming producer to a contract farming sponsor under contract faming agreement.

(d) a direct purchase of notified agricultural produce by a licensee from the agriculturist under section 72-A of the Act."

**3. Substitution of section 117.-**For section 117 of the Principal Act, the following shall be substituted, namely:-

"**117. Penalty for contravention of section 8.-** Whoever in contravention of the provisions of clause (b) of sub-section (1) of section 8 uses any place in the market area for marketing any agricultural produce or operates as a trader, commission agent, broker, processor, warehouseman or in any other capacity, without a valid licence or whoever in contravention of the provisions of sub-section (2) of section 8 uses any place for purchase or sale of notified agricultural produce shall, on conviction, be punished with imprisonment for a term which may extend to three months and with fine which may extend to rupees ten thousand but shall not be less than rupees five thousand and in case of second time contravention a fine of rupees twenty thousand and in case of third time contravention a fine of rupees thirty thousand."

## STATEMENT OF OBJECTS AND REASONS

**(As appended to at the time of Introduction)**

By an ordinance, amendment to the section 8(2), section 8(3) and section 117 of the Karnataka Agricultural Produce Marketing (Regulation and Development) Act, 1966 has been made, which is published on 16/05/2020. Subsequently, the said ordinance has been replaced by Karnataka Act No. 59 of 2020 and published in the Official Gazette on 31/12/2020.

The important features are :-

1. Consequent to the said amendment, the restriction for carrying buying and selling of notified agricultural produce in the market yards has been removed and the role of the APMCs has been restricted to the market yards only. The restriction under section 8(2) of the Act which prohibited the trade outside the market yards and for its violation, levy and conviction prescribed under section 117 has been omitted. Under section 8(3) of the Act, certain exemptions were given for the restrictions imposed under section 8(2) of the Act which is also omitted.

2. Government of India framed 03 Farm Laws through an Ordinance No:10 of 2020 and gave effect from 05/06/2020. Subsequently, the said ordinance was replaced by Act no.21/2020 and gave effect from 27/09/2020. In view of the farmers opposing the said farm laws, Government of India decided to withdraw the said Act and repealed the same by Act No.40/2021 with effect from 01/12/2021. The same has been published in the official Gazette of the Government of India.

3. Consequent to the amendment made by the State Government by Act No.59 of 2020, the following adverse effect is noticed, namely:-

   (a) the farmers who trade in the market area other than the market yards will be prone to exploitation by the traders since there is no regulatory mechanism for controlling the same;

   (b) in view of the trade in notified agricultural produce taking place outside the market yards, the revenue for the Government under different heads through taxes/cess will be affected as there is no substantiate documents available for cross verification;

   (c) the whole sale trade in notified agricultural produce is being carried in the market yards through the on-line mode (Unified Market Platform). The farmers are benefited by way of competitive and fair price for their produce sold under the Unified Market Platform. As there is no on-line system for the trade taking place outside the market yards, the farmers will not get fair and competitive prices for their grown produce;

(d) farmers are not assured of a system wherein they will get fair value of the produce sold outside the market yards;

(e) in the market yards, there is system provided under the Act for settlement of disputes arising between the farmer and the market functionaries regarding weight, payment of the produce sold etc., But, the same dispute mechanism is not available for the transactions taking place outside the market yards by the farmers;

(f) as the farmers are not aware of the prices prevailing in different markets in the State for the agricultural produce and the arrivals, the farmers will not be able to make a good decision on the price to be charged for their produce and hence they are denied in getting a competitive price;

(g) the market yards in the State are developed by the grants from Government of India, State Government and the funds of the market committees. The infrastructural facilities so far created will not be put to use fully and hence the said facilities will be wasted in due course;

(h) approximately, one lakh people are functioning in the market yards by obtaining license from the market committees and discharging the activities related to trading namely; hamals, weighmen, cartmen, assistants working in trader, commission agents and stockiest shops. They will not get the employment throughout the year and their livelihood is in peril;

(i) the APMCs are contributing to the Revolving Fund setup by the Government for implementation of Minimum Support Price Scheme. When the prices of the agricultural produce comes below the minimum support prices declared by the Government of India, the Revolving Fund will be operated. Prior to the Act amendment, the APMCs were contributing approximately Rs. 125 crores to the Revolving Fund annually and in view of the amendment, the restriction of APMCs role is restricted to the market yards, it affected the income of the APMCs and hence the contribution to the Revolving Fund has come down to 50% i.e, Rs. 60 crores;

(j) the details of the marketing operations carried out in the market yards will provide information on the prices prevailing in the market yards and the arrivals of commodities which is helpful in framing the policy and programmes by the Government. Since the details of the trading activity taking place outside the market

yards are not available, the policy and programmes to be framed by the Government will be affected substantially for lack of credible data;

(k) the expectations of the State Government by bringing in the earlier amendment which allowed the trading outside the market yards, it is noticed that the farmers produce price and income has not increased; and

(l) the market fee levied and collected by the APMCs in the State is utilized for providing infrastructural facilities in the market yards and maintenance of the APMCs. In view of the trade taking place outside the market yards, the APMCs have no control and cannot levy and collect market fee has affected their income considerably. Nearly, 50% of the income has come down which has affected the maintenance of market yards and other its obligations;

4. At present, the State Government is of the view, that the intention of amending the section 8(2), section 8(3) and section 117 of the Karnataka Agricultural Produce Marketing (Regulation and Development) Act, 1966 by Amendment Act No.59/2020, it is proposed for restoration of the earlier provision existed under the Act which will enable the APMCs to have control over the trading of notified agricultural produce in the market yards and also the market area which is of importance in protecting the interest of the growers of agricultural produce. Hence, amendment to section 8(2), section 8(3) and section 117 of the Karnataka Agricultural Produce Marketing (Regulation and Development) Act, 1966 is proposed.

5. Further, section 72(4) of the Karnataka Agricultural Produce Marketing (Regulation and Development) Act, 1966 was amended by Act No.05/2014 and given effect from 04/01/2014. The Director of Agricultural Marketing or the officers authorized by him are empowered for grant of trader license under the said amendment. under section 8 of the Act, provides for the control of marketing of notified agricultural produce and under sub-sec(b) of section 8(1) of the Act, it is specified that notified agricultural produce shall be traded under the terms and conditions of the license granted. In view of this, it is legally required that the Director of Agricultural Marketing or the officers authorized by him shall be given powers under section 8 (1)(b) of the Act for giving effectively the amendments made under section 72 (4) of the Act earlier.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**SHIVANAND PATIL**
Minister for Textiles, Sugarcane
Development and Directorate of Sugar
and Agricultural Marketing

**K.R. MAHALAKSHMI**
Secretary
Karnataka Legislative Council

## ANNEXURE

## EXTRACT FROM THE KARNATAKA AGRICULTURAL PRODUCE MARKETING (REGULATION AND DEVELOPMENT) ACT, 1966 (KARNATAKA ACT 27 OF 1966)

**xxx** **xxx** **xxx**

**8. Control of marketing of agricultural produce.-** (1) After the market is established,-

(a) no local authority shall, notwithstanding anything contained in any law for the time being in force establish, authorize or continue or allow to be established, authorized or continued any place in the market area for the marketing of any notified agricultural produce:

Provided that a local authority may establish or continue any place for retail sale of any notified agricultural produce other than cattle, sheep and goats subject to the condition that no market functionary shall operate in such place except in accordance with the provisions of this Act, and the rules and the bye laws and standing orders of the market committee;

(b) no person shall, without, or otherwise than in conformity with the terms and conditions of, a licence granted by the market committee in this behalf,-

(i) use any place in the market area for the marketing of the notified agricultural produce, or

(ii) operate in the market area or in any market therein as a trader, commission agent, broker, processor, weighman, warehouseman, or in any other capacity in relation to the marketing of the notified agricultural produce:

Provided that nothing contained in clause (b) shall apply,-

(i) to the sale of such agricultural produce if the producer of such produce is himself its seller, or

(ii) to the purchase of such produce if the purchaser is a person who purchases such produce for his domestic consumption;

(2) The Market Committee shall regulate the marketing of notified agricultural produce in the market yards, market sub-yards and sub-market yards.

**xxx** **xxx** **xxx**

**117. Penalty for contravention of section 8.-** Whoever in contravention of the provisions of clause (b) of sub-section (1) of section 8 uses any place in the market area for marketing any agricultural produce, or operates as a trader, commission agent, broker, processor, warehouseman or in any other capacity, without a valid licence shall, on

conviction, be punished with imprisonment for a term which may extend to six months and with fine which may extend to rupees five thousand but shall not be less than rupees five hundred or with both, and in the case of a continuing contravention with a further fine which may extend to two hundred rupees per day during which the contravention is continued after the first conviction.

**XXX** **XXX** **XXX**

Govt. Press, Vikasa Soudha, Bengaluru, 3rd July, 2023, P7, W.D. , Copies 300